## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯಃ ಬೇಲೂರು

**ಃಸಿ.ಸಿ. ಸಂಖ್ಯೆ–99ಃ2018**

ಪಿರ್ಯಾದಿ ಃ ಸಿ.ಜೆ. ಚಂದ್ರೇಗೌಡ ಃಬಿನ್ಃ ಲೇಟ್ ಜಯರಾಮೇಗೌಡ, 50 ವರ್ಷ, ಪಂಪ್‌ಹೌಸ್ ರಸ್ತೆ, ಬೇಲೂರು ಟೌನ್, ಬೇಲೂರು ತಾಲ್ಲೂಕು.

ವಿರುದ್ಧ

ಆರೋಪಿ ಃ ಎಲ್.ಪಿ. ಗುರುಸಿದ್ದಪ್ಪ ಃಬಿನ್ಃ ಪುಟ್ಟೇಗೌಡ, ಶಿಕ್ಷಕರು, ಕಿರಿಯ ಪ್ರಾಥಮಿಕ ಪಾಠಶಾಲೆ, ಕಲ್ಲುಶೆಟ್ಟಿಹಳ್ಳಿ ಗ್ರಾಮ, ಚಿಲ್ಕೂರು ಅಂಚೆ, ಮಾದೀಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.
ಮನೆಯ ವಿಳಾಸಃ
ಎಲ್.ಪಿ. ಗುರುಸಿದ್ದಪ್ಪ ಃಬಿನ್ಃ ಪುಟ್ಟೇಗೌಡ, ಶಿಕ್ಷಕರು, ಮನೆ ನಂ–782, 2ನೇ ಅಡ್ಡರಸ್ತೆ, ಮಲ್ಲಿಕಾರ್ಜುನ ನಿಲಯ, ಪಾರ್ಕ್ ಹತ್ತಿರ, ವಿಜಯನಗರ ಬಡಾವಣೆ, ಗುಡ್ಡೇನಹಳ್ಳಿ ಅಂಚೆ, ಹಾಸನ ನಗರ, ಹಾಸನ ತಾಲ್ಲೂಕು ಮತ್ತು ಜಿಲ್ಲೆ.

**ಃ ಆರೋಪಣೆಯ ಸಾರಾಂಶ ಃ**

ಆರೋಪಿಯಾದ ನೀನು ದಿನಾಂಕಃ 04.11.2017 ರಂದು ಪಿರ್ಯಾದುದಾರನ ಮನೆಗೆ ಬಂದು ತನ್ನ ಮಗನ ವಿದ್ಯಾಭ್ಯಾಸಕ್ಕಾಗಿ ಮತ್ತು ಮನೆಯ ಸಂಸಾರಕ್ಕಾಗಿ ಮಾಡಿರುವ ಕೈಸಾಲವನ್ನು ತೀರಿಸುವ ಉದ್ದೇಶದಿಂದ ಪಿರ್ಯಾದುದಾರನಿಂದ ರೂ.3,00,000/– ಗಳನ್ನು ನಗದಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿ ಮಾಡುವ ಉದ್ದೇಶದಿಂದ ಆರೋಪಿಯಾದ ನೀನು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೇಲೂರು ಶಾಖೆಯ ಚೆಕ್ ನಂಃ 572080ರ ರೂ. 3,00,000/– ಮೊತ್ತದ ಚೆಕ್‌ನ್ನು ದಿನಾಂಕಃ 06.12.2017ಕ್ಕೆ ನಮೂದಿಸಿ ಕೊಟ್ಟಿದ್ದು, ಪಿರ್ಯಾದುದಾರನು ಸದರಿ ಚೆಕ್‌ನ್ನು ನಗಧೀಕರಿಸಿಕೊಳ್ಳುವ ಉದ್ದೇಶದಿಂದ ತಾನು ಖಾತೆ ಹೊಂದಿರುವ ಹೆಚ್.ಡಿ.ಸಿ.ಸಿ. ಬ್ಯಾಂಕ್,

ಬೇಲೂರು ಶಾಖೆಯ ಮೂಲಕ ಆರೋಪಿಯಾದ ನಿನ್ನ ಖಾತೆಗೆ ಹಾಜರುಪಡಿಸಿದಾಗ ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿನಾಂಕಃ 06–12–2017 ರಂದು ಬಂದ ಹಿಂಬರಹದ ಮೇರೆಗೆ ಆರೋಪಿಯಾದ ನಿನಗೆ ದಿನಾಂಕಃ 08.12.2017 ರಂದು ಚೆಕ್ ನಗಧೀಕರಣಗೊಳ್ಳದ ಸಂಗತಿಯನ್ನು ನೊಂದಾಯಿತ ಅಂಚೆಯ ನೋಟೀಸಿನ ಮೂಲಕ ಕಳಹಿಸಿದ್ದು, ಸದರಿ ನೋಟೀಸ್ ಆರೋಪಿಯಾದ ನಿನಗೆ ಜಾರಿಯಾದರೂ ಸಹ, ಇದೂವರೆಗೂ ಯಾವುದೇ ಹಣವನ್ನಾಗಲೀ, ಮರು ಉತ್ತರವನ್ನಾಗಲೀ ನೀಡಿರುವುದಿಲ್ಲ. ಆರೋಪಿಯಾದ ನಿನ್ನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಚೆಕನ್ನು ನೀಡಿ ವರ್ಗಾವಣೆಗೊಳ್ಳಬಲ್ಲ ದಸ್ತಾವೇಜಗಳ ಅಧಿನಿಯಮ ಪ್ರಕರಣ 138 ಸಹವಾಚಕ 142 ರಂತೆ ಅಪರಾಧವನ್ನು ಎಸಗಿರುತ್ತೀಯಾ ಅಂತ ಪಿರ್ಯಾದಿ ಆರೋಪಿಸಿರುತ್ತಾನೆ.

*ಪ್ರಶ್ನೆ ಃ ಈಗ ನಿನಗೆ ಓದಿ ಹೇಳಿ ವಿವರಿಸಿದ ಆರೋಪದ ಅಂಶಗಳು ಅರ್ಥವಾಯಿತೇ?*
*ಉತ್ತರ ಃ*

*ಪ್ರಶ್ನೆ ಃ ನೀನು ಆರೋಪವನ್ನು ಒಪ್ಪುವೆಯೋ ಅಥವಾ ವಿಚಾರಣೆಯಾಗಬೇಕೋ?*
*ಉತ್ತರಃ*

(ಆಪಾದಿತನಿಗೆ ಆರೋಪದ ಅಂಶವನ್ನು ಓದಿ ಹೇಳಿ ವಿವರಿಸಿದ ಮೇಲೆ ಆತನು ಮೇಲ್ಕಂಡಂತೆ ನೀಡಿದ ಉತ್ತರವನ್ನು ಸ್ವಹಸ್ತಾಕ್ಷರದಿಂದ ಮುಕ್ತ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.)

ಸ್ಥಳ ಃ ಬೇಲೂರು
ದಿನಾಂಕಃ 05–10–2021

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಬೇಲೂರು